# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1083

ಸದಸ್ಯರ ಹೆಸರು : ಶ್ರೀ ಕಾಂತರಾಜ್

(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 24-09-2021

ಉತ್ತರಿಸುವ ಮಾನ್ಯ ಸಚಿವರು : ಕೃಷಿ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ (KAPPEC) ನಿಯಮಿತವನ್ನು ಯಾವಾಗ ಸ್ಥಾಪನೆ ಮಾಡಲಾಯಿತು ; ಇದರ ಧ್ಯೇಯೋದ್ದೇಶಗಳೇನು; (ಇದರ ಕೇಂದ್ರ ಕಛೇರಿ ವಿಳಾಸ, ಹಾಗೂ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರದೊಂದಿಗೆ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ವು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, ದಿನಾಂಕ: 22-04-1996 ರಂದು ಸ್ಥಾಪಿಸಲಾಗಿದೆ. ವಿವರ ಕೆಳಕಂಡಂತಿದೆ:-<br>**ಕೇಂದ್ರ ಕಛೇರಿ ವಿಳಾಸ:** ನಂ.17, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ (ರಿಚ್‌ಮಂಡ್ ರಸ್ತೆ), ಬೆಂಗಳೂರು-560025<br>**ದೂರವಾಣಿ:** 22271194 / 22243082<br>**ಇ-ಮೇಲ್:** kappec1996@gmail.com<br>**ಜಾಲತಾಣ:** www.kappec.karnataka.gov.in<br>ಕೆಪೆಕ್ ಸಂಸ್ಥೆಯ ಧ್ಯೇಯೋದ್ದೇಶಗಳು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಸದರಿ ನಿಗಮಕ್ಕೆ ಇಲ್ಲಿಯವರೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ಇತರೆಗಳಿಂದ ಎಷ್ಟು ಹಣ ನೀಡಲಾಗಿದೆ; ಖರ್ಚಾಗಿರುವ ಹಣವೆಷ್ಟು; ಮತ್ತು ಉಳಿಕೆ ಹಣವೆಷ್ಟು; (ವಿವರವಾದ ಮಾಹಿತಿ ನೀಡುವುದು) | ಕಳೆದ 5 ವರ್ಷಗಳಿಂದ ಸದರಿ ನಿಗಮಕ್ಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಒದಗಿಸಿರುವ ಅನುದಾನ, ಖರ್ಚಾಗಿರುವ ಅನುದಾನ ಹಾಗೂ ಉಳಿಕೆಯಾಗಿರುವ ಅನುದಾನದ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ |
| ಇ) | ಸದರಿ ನಿಗಮದಡಿ ನೋಂದಣಿಗೊಂಡ ಏಜೆನ್ಸಿಗಳು ಯಾವುವು ; ಅವುಗಳು ಕಳೆದ 3 ವರ್ಷಗಳಿಂದ ಈ ನಿಗಮದಿಂದ ಪಡೆದ ಅನುದಾನ ವಿವರ ನೀಡುವುದು; | ಕೆಪೆಕ್ ಸಂಸ್ಥೆಯಡಿ ಯಾವುದೇ ಏಜೆನ್ಸಿಗಳು ನೋಂದಣಿಯಾಗಿರುವುದಿಲ್ಲ. |
| ಈ) | ಈ ನಿಗಮದಿಂದ ರಾಜ್ಯ ರೈತರಿಗೆ ದೊರೆತಿರುವ ಸೌಲಭ್ಯಗಳಾವುವು; (ವಿವರವಾದ ಮಾಹಿತಿ ನೀಡುವುದು) | ಕೆಪೆಕ್ ಸಂಸ್ಥೆಯಿಂದ ರಾಜ್ಯದ ವಿಜಯಪುರ, ಕುಷ್ಟಗಿ (ಕೊಪ್ಪಳ ಜಿಲ್ಲೆ), ಹುಬ್ಬಳ್ಳಿ (ಧಾರವಾಡ ಜಿಲ್ಲೆ), ಬಾಗಲಕೋಟೆ, ಗದಗ ಹಾಗೂ ಹುಮ್ನಾಬಾದ್ (ಬೀದರ್ ಜಿಲ್ಲೆ) ಗಳಲ್ಲಿ ಶೀತಲ ಗೃಹಗಳನ್ನು ಹೊಂದಿದ್ದು, ಸದರಿ ಶೀತಲ ಗೃಹಗಳಲ್ಲಿ ರೈತರ ಉತ್ಪನ್ನಗಳನ್ನು ಶೇಖರಿಸಲು ರೈತರಿಗೆ ಆದ್ಯತೆ ನೀಡಲಾಗುತ್ತಿದೆ. |

| | | |
|---|---|---|
| ಉ) | ಕಳೆದ 3 ವರ್ಷಗಳಲ್ಲಿ ರೈತರ ಯಾವ ಕೃಷಿ ಉತ್ಪನ್ನಗಳನ್ನು ಸಂಸ್ಕರಣೆ ಮಾಡಿ ರಫ್ತು ಮಾಡಲಾಗಿರುತ್ತದೆ ? (ವಿವರವಾಗಿ ವರ್ಷವಾರು ಮಾಹಿತಿ ನೀಡುವುದು) | 2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: 21/2015-20 ದಿನಾಂಕ: 29-09-2019 ರಲ್ಲಿ ಈರುಳ್ಳಿ ರಫ್ತನ್ನು ನಿಷೇಧಿಸಿ ಆದೇಸಶಿಸಲಾಗಿತ್ತು. ಕೆಪೆಕ್ ಸಂಸ್ಥೆಯು ರಾಜ್ಯ ಸರ್ಕಾರದ ಮೂಲಕ ಮನವಿ ಸಲ್ಲಿಸಿ ಸದರಿ ರಫ್ತು ನಿರ್ಬಂಧವನ್ನು ತೆರವುಗೊಳಿಸಿ ಬೆಂಗಳೂರು ಗುಲಾಬಿ ಈರುಳ್ಳಿ (ಸುಮಾರು 9000 ಮೆಟ್ರಿಕ್ ಟನ್) ಯನ್ನು ರಫ್ತಾಗುವಂತೆ ಅನುವುಗೊಳಿಸಲಾಯಿತು.<br>ಕೆಪೆಕ್ ಸಂಸ್ಥೆಯು 2020-21ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ನಾಲ್ಕು ರೈತ ಉತ್ಪಾದಕ ಸಂಸ್ಥೆಗಳು ಹಾಗೂ ರಫ್ತುದಾರರೊಂದಿಗೆ ಒಡಂಬಡಿಕೆ ಸಹಿ ಮಾಡಿಸಿ ಸುಮಾರು 5000 ಮೆಟ್ರಿಕ್ ಟನ್ ಬೆಂಗಳೂರು ಗುಲಾಬಿ ಈರುಳ್ಳಿಯನ್ನು ಮಲೇಷಿಯಾ ಮತ್ತು ಶ್ರೀಲಂಕಾ ದೇಶಗಳಿಗೆ ರಫ್ತು ಮಾಡಲು ಸಹಕರಿಸಿದೆ.<br>ಮುಂದುವರೆದು, ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: 31/2015-20 ದಿನಾಂಕ: 14-09-2020 ರಲ್ಲಿ ಈರುಳ್ಳಿ ರಫ್ತನ್ನು ನಿಷೇಧಿಸಿ ಆದೇಶಿಸಲಾಗಿತ್ತು. ಕೆಪೆಕ್ ಸಂಸ್ಥೆಯು ರಾಜ್ಯ ಸರ್ಕಾರದ ಮೂಲಕ ಮನವಿ ಸಲ್ಲಿಸಿ ಸದರಿ ರಫ್ತು ನಿರ್ಬಂಧವನ್ನು ತೆರವುಗೊಳಿಸಿ ಬೆಂಗಳೂರು ಗುಲಾಬಿ ಈರುಳ್ಳಿ (ಸುಮಾರು 10000 ಮೆಟ್ರಿಕ್ ಟನ್) ಯನ್ನು ರಫ್ತಾಗುವಂತೆ ಅನುವುಗೊಳಿಸಲಾಯಿತು.<br>ಮುಂದುವರೆದು, ಮಾವು ಮತ್ತು ದಾಳಿಂಬೆ ರಫ್ತಿಗೆ ಹುಬ್ಬಳ್ಳಿ ಮತ್ತು ಚಿತ್ರದುರ್ಗ ರೈತ ಉತ್ಪಾದಕ ಸಂಘಗಳಿಗೆ ಹಾಗೂ ರೈತರಿಗೆ ರಫ್ತುದಾರರೊಂದಿಗೆ ನೇರ ಸಂಪರ್ಕ ಕಲ್ಪಿಸಿ ಕೆಪೆಕ್ ಸಂಸ್ಥೆಯಡಿ ನಿರ್ಮಿಸಿರುವ ಸಮಗ್ರ ಶೀತಲ ಸರಪಳಿ ಘಟಕ, ಹುಬ್ಬಳ್ಳಿಯಿಂದ ಮಾವು ರಫ್ತು ಮಾಡಲು ಪ್ರೋತ್ಸಾಹಿಸಲಾಗಿದೆ. |

**ಸಂಖ್ಯೆ: ಕೃಇ/112/ಕೃಕೈಉ/2021**

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1083

### ಅನುಬಂಧ-1

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ದ ಧ್ಯೇಯೋದ್ದೇಶಗಳು ಕೆಳಕಂಡಂತಿವೆ:–

* ಕೃಷಿ, ತೋಟಗಾರಿಕೆ ಹಾಗೂ ಪುಷ್ಪೋದ್ಯಮದ ಅಭಿವೃದ್ಧಿ, ಪದೋನ್ನತಿ, ಸಂಸ್ಕರಣೆ ಹಾಗೂ ರಫ್ತಿಗೆ ಅನುಕೂಲ ಕಲ್ಪಿಸುವುದು.
* ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಕೊಯ್ಲಿನ ನಂತರದ ನಿರ್ವಹಣೆಗೆ ಅವಶ್ಯವಾದ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡುವುದು ಹಾಗೂ ಖಾಸಗಿಯವರಿಗೆ ನಿರ್ಮಿಸಲು ಪ್ರೋತ್ಸಾಹಿಸುವುದು.
* ರೈತರು, ವಿಜ್ಞಾನಿಗಳು, ಮತ್ತು ಹಣಕಾಸು ಸಂಸ್ಥೆಯ ಅಧಿಕಾರಿಗಳನ್ನು ಒಳಗೊಂಡ ಸಭೆಗಳನ್ನು ನಡೆಸಿ ರೈತರಿಗೆ ಅವರಲ್ಲಿ ಕೃಷಿ ಉತ್ಪನ್ನಗಳ ರಫ್ತಿನಿಂದಾಗುವ ಅನುಕೂಲಗಳ ಬಗ್ಗೆ ತಿಳಿಸುವುದು.
* ಸರ್ಕಾರದಿಂದ ಘೋಷಿಸಲ್ಪಡುವ ಕೊಯ್ಲಿನ ನಂತರದ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನಕ್ಕೆ ನೋಡಲ್ ಏಜನ್ಸಿಯಾಗಿ ಕಾರ್ಯ ನಿರ್ವಹಣೆ ಅಥವಾ ಕಾಲ ಕಾಲಕ್ಕೆ ಸರ್ಕಾರವು ನಿಯೋಜಿಸುವ ಚಟುವಟಿಕೆಗಳು / ನಿರ್ವಹಣೆ
* ರೈತರಿಗೆ, ರೈತರ ಸಂಸ್ಥೆಗಳಿಗೆ, ಭಾವೀ ಉದ್ದಿಮೆದಾರರಿಗೆ / ರಫ್ತುದಾರರಿಗೆ ರಫ್ತು ವ್ಯಾಪಾರ ಪ್ರಾರಂಭಿಸಲು ಹಾಗೂ ಕೃಷಿ ಸಂಸ್ಸರಣೆ ಘಟಕಗಳನ್ನು ಸ್ಥಾಪಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.

ಕೆಪೆಕ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸ್ಮತ್ತಿರುವ ಅಧಿಕಾರಿ / ಸಿಬ್ಬಂದಿಯ ವಿವರ ಕೆಳಕಂಡಂತಿದೆ:–

| ಕ್ರ.ಸಂ. | ಹೆಸರು | ಪದನಾಮ |
|---|---|---|
| **(ಅ)** | **ಶ್ರೀ ಚಿಕ್ಕಣ್ಣಗೌಡ್ರು** | **ಮಾಜಿ ಶಾಸಕರು / ಅಧ್ಯಕ್ಷರು** |
| **(ಆ) : ಖಾಯಂ** | | |
| 1 | ಶ್ರೀ ಮೊಹಮ್ಮದ ಪರವೇಜ್ ಹ. ಬಂಥನಾಳ | ವ್ಯವಸ್ಥಾಪಕ ನಿರ್ದೇಶಕರು |
| 2 | ಶ್ರೀಮತಿ ಅಂಬಿಕಾ.ಎನ್ | ಪ್ರಧಾನ ವ್ಯವಸ್ಥಾಪಕರು (ಪ್ರಭಾರ) |
| 3 | ಶ್ರೀ ಸದಾನಂದ ಎಸ್. ಮಣೂರ್ | ಕ್ಷೇತ್ರಾಧಿಕಾರಿ |
| 4 | ಶ್ರೀ ಡಿ. ರಾಮಚಂದ್ರ | ಗಣಕಯಂತ್ರ ನಿರ್ವಾಹಕರು |
| 5 | ಶ್ರೀ ಆರ್ ಶ್ರೀನಿವಾಸ್ | ದಲಾಯತ್ |
| 6 | ಶ್ರೀ ಕೆ.ಆರ್. ಗೋಪಿನಾಥ್ | ದಲಾಯತ್ |
| 7 | ಶ್ರೀ ಹೆಚ್.ಟಿ. ಲೋಕೇಶ್ | ವಾಹನ ಚಾಲಕ |

| | | |
|---|---|---|
| 8 | ಶ್ರೀ ಸಿ.ಬಿ. ರಮೇಶ್ | ವಾಹನ ಚಾಲಕ |
| 9 | ಶ್ರೀ ಎಂ. ಗಂಗಾಧರ | ವಾಹನ ಚಾಲಕ |
| **(ಇ) : ಗುತ್ತಿಗೆ** | | |
| 1 | ಶ್ರೀ ಎಂ.ಡಿ. ರಾಮು | ದಲಾಯತ್ |
| 2 | ಶ್ರೀ ಬಿ. ದೇವರಾಜು | ದಲಾಯತ್ |
| 3 | ಶ್ರೀ ಜಿ.ಸಿ. ಬಿರಾದರ್ | ಶೀತಲಗೃಹ ಮೇಲ್ವಿಚಾರಕ |
| 4 | ಶ್ರೀ ಉಮೇಶ್ ಡಿ. ಹೊಲೇರ್ | ವರ್ಕ್‌ಮನ್ ಜನರಲ್ ಯುಟಿಲಿಟಿ |
| 5 | ಶ್ರೀ ಎಸ್.ವಿ. ದೇಶಪಾಂಡೆ | ಜೂನಿಯರ್ ಆಪರೇಟರ್ |
| 6 | ಶ್ರೀ ಭೀಮನಗೌಡ ಬಿರಾದರ್ | ಜೂನಿಯರ್ ಆಪರೇಟರ್ |
| 7 | ಶ್ರೀ ಎಸ್.ಪಿ. ನಾಗರಾಜು | ವಾಹನ ಚಾಲಕ |
| 8 | ಶ್ರೀ ಸಿ. ಶಿವಶಂಕರ್ | ಕಛೇರಿ ಸಹಾಯಕ |
| **(ಇ) : ಹೊರಗುತ್ತಿಗೆ** | | |
| 1 | ಕು. ಅಮೂಲ್ಯ | ಲೆಕ್ಕಿಗರು |
| 2 | ಶ್ರೀ ಸೋಮ್‌ಲಿಂಗ್ ನಾಗೋಜಿ | ಆಪರೇಟರ್ |
| 3 | ಶ್ರೀ ದತ್ತರಾಜ್ ಚವ್ಹಾಣ್ | ಆಪರೇಟರ್ |
| 4 | ಶ್ರೀ ಸೈಯದ್ ಜಾಕಿರ್ ಹುಸೈನ್ ಅತ್ತರ್ | ಆಪರೇಟರ್ |
| 5 | ಶ್ರೀ ಶಿವನಗೌಡ ಪಾಟೀಲ್ | ಕೇರ್‌ಟೇಕರ್ |
| 6 | ಶ್ರೀ ಮಹೇಶ್ | ಆಪರೇಟರ್ |
| 7 | ಶ್ರೀ ಗಣಪತಿ | ಕೇರ್‌ಟೇಕರ್ |
| 8 | ಶ್ರೀ ಮಹಂತೇಶ್ ಇ ಬಂಡಿ | ಆಪರೇಟರ್ |
| 9 | ಶ್ರೀ ವಸಂತ್ ಬಿ. ಪವಾರ್ | ಆಪರೇಟರ್ |
| 10 | ಶ್ರೀ ಶಿವಪ್ಪ ಭೈರಶೆಟ್ಟಿ | ಆಪರೇಟರ್ |
| 11 | ಶ್ರೀ ರಾವ್‌ಸಾಹೇಬ್ ಬಿ. ಬೆಳಣವರ್ | ಕೇರ್‌ಟೇಕರ್ |
| 12 | ಶ್ರೀ ಶಿವರಾಜ್ ಮಾದರ್ | ಆಪರೇಟರ್ |
| 13 | ಶ್ರೀ ಹುಲಗೇಶ್ ಮಾದರ್ | ಆಪರೇಟರ್ |
| 14 | ಶ್ರೀ ದೇವಪ್ಪ | ಕೇರ್‌ಟೇಕರ್ |
| 15 | ಶ್ರೀ ಗೊಡಚಾಯ್ಯ ಬಿ.ಗಂಜಲ್‌ಮಠ್ | ಆಪರೇಟರ್ |
| 16 | ಶ್ರೀ ಶಿವರಾಜ್ ಪಿ. ಕೌಡಿ | ಕೇರ್‌ಟೇಕರ್ |
| 17 | ಶ್ರೀ ಶರಣಪ್ಪ ವಿ.ಕೆ. | ಆಪರೇಟರ್ |
| 18 | ಶ್ರೀ ಮಾಸ್ತಿ ವಿಕಾಸ್ ಭಜನೇತ್ರಿ ಇಟ್ಟಗಿ | ಕೇರ್‌ಟೇಕರ್ |
| 19 | ಶ್ರೀ ಶಂಕರಗೌಡ ಎಫ್. ನಿರಂಜನಗೌಡರ್ | ಅಧ್ಯಕ್ಷರ ಆಪ್ತ ಕಾರ್ಯದರ್ಶಿ |
| 20 | ಶ್ರೀ ಬಸವರಾಜ್ ಸಿ. ಮುದ್ದೇನಕೊಪ್ಪ | ಅಧ್ಯಕ್ಷರ ಆಪ್ತ ಸಹಾಯಕ |
| 21 | ಶ್ರೀ ಗಡಿಗೆಪ್ಪ ಗಂಗಪ್ಪ ಬಾಗೇವಾಡಿ | ಅಧ್ಯಕ್ಷರ ವಾಹನ ಚಾಲಕ |

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1083

### ಅನುಬಂಧ-2

### ಕಳೆದ 5 ವರ್ಷಗಳಿಂದ ಕೆಪೆಕ್ ಸಂಸ್ಥೆಗೆ ಕೇಂದ್ರ / ರಾಜ್ಯ ಸರ್ಕಾರದಿಂದ ಒದಗಿಸಲಾದ, ಖರ್ಚಾಗಿರುವ ಹಾಗೂ ಉಳಿಕೆಯಾಗಿರುವ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ವರ್ಷ | ಕೇಂದ್ರ ಸರ್ಕಾರ | | | ರಾಜ್ಯ ಸರ್ಕಾರ | | |
|---|---|---|---|---|---|---|---|
| | | ಒದಗಿಸಿರುವ ಅನುದಾನ | ಖರ್ಚಾಗಿರುವ ಅನುದಾನ | ಉಳಿಕೆಯಾಗಿರುವ ಅನುದಾನ | ಒದಗಿಸಿರುವ ಅನುದಾನ | ಖರ್ಚಾಗಿರುವ ಅನುದಾನ | ಉಳಿಕೆಯಾಗಿರುವ ಅನುದಾನ |
| 1 | 2016–17 | 295.15 | 295.15 | -- | 1521.37 | 1521.37 | -- |
| 2 | 2017–18 | 20.00 | 20.00 | -- | 3616.22 | 1683.63 | 1932.59 |
| 3 | 2018–19 | 252.98 | 252.98 | -- | 2550.00 | 1050.00 | 1500.00 |
| 4 | 2019–20 | 113.09 | 113.09 | -- | 507.04 | 426.08 | 80.96 |
| 5 | 2020–21 | 2474.75 | 137.39 | 2337.36 | 65.00 | 64.48 | 0.52 |